

ರಸ್ತೆಗಳಲ್ಲಿ ಕಾಣಸಿಗುವ ಇಂಥ ದೃಶ್ಯಗಳು ಏನನ್ನು ಸೂಚಿಸುತ್ತವೆ? ಈ ಪ್ರಶ್ನೆಗೆ ಉತ್ತರಿಸುವವರು ಯಾರು?

ನೋವಿನಲ್ಲಿ ಜೊತೆಯಾಗಬೇಕು, ತೀರಿಕೊಂಡವರಿಗೆ ಮೌನವಾದ ಗೌರವ ಸಲ್ಲಿಸಬೇಕು' ಎಂಬ ನಂಬಿಕೆಯೊಂದು ನಮ್ಮ ಸಮಾಜದಲ್ಲಿದೆ. ಕೊರೊನಾ ಸಂದರ್ಭದಲ್ಲಿ ಈ ಮೌಲ್ಯವನ್ನು ಉಳಿಸಿಕೊಳ್ಳುವುದು ಕಷ್ಟವಾಗಿರಬಹುದು, ಆದರೆ ಘನತೆಯ ನಡೆಯನ್ನು ಕಾಯ್ದುಕೊಳ್ಳುವ ಸತತ ಪ್ರಯತ್ನವನ್ನಂತೂ ಎಲ್ಲರೂ ಮಾಡಲೇಬೇಕಲ್ಲವೇ.

## ಸ್ವಯಂಪ್ರೀತಿಯೇ ಇಲ್ಲವಲ್ಲ!

ಹಿರಿಯರು ತೀರಿಕೊಂಡಾಗ, ಮಕ್ಕಳಾದವರು ಸಾಂಪ್ರದಾಯಿಕ ಆಚರಣೆಗಳನ್ನು ನಡೆಸಿ, ಉತ್ತರಕ್ರಿಯೆ ನಡೆಸುವುದು ಸದ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಧ್ಯವಾಗಲಿಕ್ಕಿಲ್ಲ. ಆದರೆ ಮೂಲಭೂತ ಕರ್ತವ್ಯ ನಿರ್ವಹಿಸಲು ಹಿಂದೇಟು ಹಾಕುವುದು ಏಕೆ? ಅಪ್ಪನೋ ಅಮ್ಮನೋ ಸಾವಿಗೆ ಈಡಾಗಿರುವುದರಿಂದ ಅವರ ಎದೆಯಲ್ಲಿ ನೋವಿನ ಗೀರು ಮೂಡುವುದಿಲ್ಲವೇ? ಮಕ್ಕಳು ಹೃದಯಹೀನರಂತೆ ಯಾಕೆ ಹೀಗೆ ವರ್ತಿಸುತ್ತಾರೆ ಎಂಬ ಪ್ರಶ್ನೆಯನ್ನು ಸಾಮಾಜಿಕ ಹೋರಾಟಗಾರ ರವಿಕೃಷ್ಣಾ ರೆಡ್ಡಿ ತಮ್ಮದೇ ಆದ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾರೆ: 'ಕೊರೊನಾ ಸಂದರ್ಭದಲ್ಲಿ ಸಂಬಂಧಗಳ ಕುರಿತು ಅಥವಾ ವ್ಯವಹಾರ ಕುರಿತು ಜನರ ವರ್ತನೆಯನ್ನು ದೂರದಿಂದ ಗಮನಿಸಿದರೆ, ಅವರಿಗೆ ಸ್ವತಃ ತಮ್ಮ ಬಗ್ಗೆಯೇ ಪ್ರೀತಿ ಇಲ್ಲವೇನೋ ಎನಿಸುತ್ತದೆ. ಒಬ್ಬ ಮನುಷ್ಯನ ಜೀವಿತಾವಧಿಯಲ್ಲಿ ಹೃದಯಶ್ರೀಮಂತಿಕೆಯ ಅನುಭವಗಳಿಗೆ ಪಕ್ಕಾಗಬೇಕು ಎಂಬ ಆಶಯವಾಗಲೀ ಕನಸಾಗಲೀ ಇತ್ತೀಚೆಗಿನ ತಲೆಮಾರಿನಲ್ಲಿ ಕಾಣಿಸುತ್ತಿಲ್ಲ. ಅಂತಹ ಕನಸು ಅಥವಾ ಆಶಯಗಳನ್ನು ಹೊಂದಿರಬೇಕಾದರೆ ವ್ಯಕ್ತಿಯು ಮೌಲ್ಯಗಳಿಗೆ ಬದ್ಧನಾಗಿರಬೇಕು'.

'ಕೊರೊನಾ ಕಾರಣದಿಂದಾಗಿ ಸಾವುಗಳಾದಾಗ ಅಥವಾ ಆಪ್ತರಿಗೆ ಸೋಂಕು ಉಂಟಾದಾಗ, ಕೆಲವು ವ್ಯಕ್ತಿಗಳು ವರ್ತಿಸುವ ರೀತಿಯನ್ನು ನೋಡಿದರೆ, ಅವರ ಬಳಿ ಸರಿಯಾದ ಸ್ವಾರ್ಥಭಾವವೂ ಇಲ್ಲ. ಸ್ವಾರ್ಥಭಾವವಾದರೂ ತೀವ್ರವಾಗಿ ಇದ್ದಲ್ಲಿ, 'ಸುತ್ತಮುತ್ತಲಿನ ಜನರು ಚೆನ್ನಾಗಿದ್ದರೆ, ನಾವೂ ಚೆನ್ನಾಗಿರುತ್ತೇವೆ' ಎಂಬ ಭಾವನೆ ಹೃದಯದಲ್ಲಿ ಇರಬೇಕು. ಆದರೆ ಈಗ ಜನರಲ್ಲಿ ಕಾಣುತ್ತಿರುವುದು ತಮ್ಮ ಸಾಮರ್ಥ್ಯದ ಮೇಲೆ ಆತ್ಮವಿಶ್ವಾಸ ಇಲ್ಲದಂತಹ ಒಂದು ರೀತಿಯ ಪುಕ್ಕಲುತನ. ಅಪ್ಪಅಮ್ಮನನ್ನು ಏನಾದರೂ ಮಾಡಿ ಉಳಿಸಿಕೊಳ್ಳುತ್ತೇವೆ ಎನ್ನುವ ಛಾತಿ ಅಥವಾ ಅವರನ್ನು ಘನತೆಯಿಂದ ಕಳುಹಿಸಿಕೊಡುತ್ತೇವೆ ಎಂಬ ನಿಲುವಾಗಲೀ ಕಾಣುವುದಿಲ್ಲ. ಈ ಮನಸ್ಥಿತಿಗೆ ಒಂದು ಬಗೆಯ ಹಟಮಾರಿತನ ಬೇಕಾಗುತ್ತದೆ. ಅಂತಹ ಹಟಮಾರಿತನ, ಇಚ್ಛಾಶಕ್ತಿ ನಮ್ಮ ಹಿರಿಯರಲ್ಲಿತ್ತು. ಈ ಗುಣ, ಮನೋಭಾವ ಹೊಸ ತಲೆಮಾರಿನಲ್ಲಿ ಕಾಣುತ್ತಿಲ್ಲ' ಎಂದು ರವಿಕೃಷ್ಣಾ ರೆಡ್ಡಿ ವಿವರಿಸುತ್ತಾರೆ.

## ಭಿನ್ನ ಆಯಾಮಗಳು

'ಮಕ್ಕಳ ಸ್ಥಾನದಲ್ಲಿ ಇರುವವರು ಹೀಗೇಕೆ ವರ್ತಿಸುತ್ತಿದ್ದಾರೆ ಎಂಬ ಪ್ರಶ್ನೆಗೆ ಕಾರಣಗಳು ಭಿನ್ನವಾಗಿರುತ್ತವೆ' ಎನ್ನುತ್ತಾರೆ ಹಿರಿಯ ಲೇಖಕಿ ರೇಣುಕಾ ರಾಮಚಂದ್ರ. 'ಎಲ್ಲ ಮಕ್ಕಳೂ ತಂದೆ ತಾಯಿಯನ್ನು ಚೆನ್ನಾಗಿ ನಡೆಸಿಕೊಳ್ಳುವುದಿಲ್ಲ ಎನ್ನುವಂತಿಲ್ಲ. ಅಪವಾದಗಳು ಇರಬಹುದು. ಕೆಲವು ಮಕ್ಕಳು ಹಿರಿಯರನ್ನು ಹಿಂದಿನ ಕಾಲಕ್ಕಿಂತ ಹೆಚ್ಚು ಚೆನ್ನಾಗಿ ನಡೆಸಿಕೊಳ್ಳುತ್ತಿದ್ದಾರೆ. ನನ್ನ ಸ್ನೇಹಿತೆಯರ ಮನೆಯಲ್ಲಿ ಇಂತಹ ಘಟನೆಗಳನ್ನು ನೋಡಿದ್ದೇನೆ. ಪರಿಸ್ಥಿತಿ ಹದಗೆಟ್ಟಿದೆ ಎಂದು ಕಾಣಿಸಿದರೆ, ಅದಕ್ಕೆ ಮಕ್ಕಳ ಧೋರಣೆಯಷ್ಟೇ ಹೊಣೆಯಾಗುವುದಿಲ್ಲ. ಹಿರಿಯರು ತಮ್ಮ ಯೌವನದ ಕಾಲದಲ್ಲಿ ಮಕ್ಕಳನ್ನು, ಮನೆಯವರನ್ನು ಹೇಗೆ ನಡೆಸಿಕೊಂಡಿದ್ದರು ಎಂಬುದೂ ಕಾರಣವಾಗುತ್ತದೆ. ಹಿರಿಯರೂ ಅಷ್ಟೇ, ಈಗಿನ ತಲೆಮಾರಿನ ಜನರ ಜಂಜಡಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಇಂದು ದುಡಿಯುವವರ ಮುಂದಿರುವ ಸವಾಲುಗಳು ವಿಭಿನ್ನವಾಗಿವೆ. ಹಿರಿಯರ ಯೌವನದ ಕಾಲದಲ್ಲಿ ಇದ್ದಂತಹ ಮಾದರಿಯಲ್ಲಿಯೇ ಸವಾಲುಗಳು ಈಗಿಲ್ಲ. ಇಂದಿನವರ ಅಗತ್ಯಗಳು ಹೆಚ್ಚಾಗಿವೆ. 'ಇದ್ದುದರಲ್ಲಿ ಸುಖವಾಗಿ ಬಾಳೋಣ' ಎಂದು ಅವರು ಸುಮ್ಮನೇ ಕೂರುವಂತಿಲ್ಲ. ಕಾಲದ ಓಟದಲ್ಲಿ ಮಕ್ಕಳೂ ಓಡಲೇಬೇಕು ಅಲ್ಲವೇ' ಎನ್ನುವುದು ಅವರ ಪ್ರಶ್ನೆ.

'ಹಿರಿಯರು ಕುಟುಂಬವನ್ನು ನಿರ್ವಹಿಸುತ್ತಿರುವಾಗ ಮಕ್ಕಳನ್ನು ನಿರ್ಲಕ್ಷಿಸಿ ನೋಯಿಸಿರುವ ಘಟನೆಗಳೂ ಮಕ್ಕಳ ಮನಸ್ಸನ್ನು ಕದಡಬಹುದು. ನನ್ನ ಪರಿಚಯದವರನ್ನು ನೋಡಲು ನಾನು ಆಗಾಗ ವೃದ್ಧಾಶ್ರಮಕ್ಕೆ ತೆರಳುತ್ತೇನೆ. ಅಲ್ಲಿ ಹಲವರನ್ನು ಮಾತನಾಡಿಸುತ್ತೇನೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇರುವವರೂ ಅಲ್ಲಿದ್ದಾರೆ.

ಮನೆಯವರೊಂದಿಗೆ ಹೊಂದಾಣಿಕೆ ಕಷ್ಟವೆಂದು ವೃದ್ಧಾಶ್ರಮಕ್ಕೆ ಬಂದರೆ, ಅಲ್ಲಿಯೂ ಅಪರಿಚಿತ ಸಿಬ್ಬಂದಿಯೊಂದಿಗೆ, ಜೊತೆಗಿರುವವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆ ಇದ್ದೇ ಇರುತ್ತದೆ. ಅಂದಮೇಲೆ ಹೊಸತಲೆಮಾರಿನ ತಮ್ಮದೇ ಮನೆಯವರೊಡನೆ ಹೊಂದಾಣಿಕೆಯನ್ನು ಹಿರಿಯ ತಲೆಮಾರು ಕಲಿಯಬೇಕು' ಎನ್ನುತ್ತಾರೆ ರೇಣುಕಾ.